ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ರೊದ್ದ ರಸ್ತೆ, ಧಾರವಾಡ – 580008

ದಿನಾಂಕ: 14-09-2016

# ಪ್ರಕಟಣೆ

ವಿಷಯ : 2016-17 ನೇ ಸಾಲಿನ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ / ಪ್ರೌಢ ಶಾಲಾ ಶಿಕ್ಷಕರ ಪರಸ್ಪರ ಅಂತರ ಘಟಕ ವರ್ಗಾವಣೆ ಕೌನ್ಸಿಲಿಂಗ್ ಯಥಾವತ್ತಾಗಿ ನಡೆಯುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬೆಳಗಾವಿ ವಿಭಾಗದ ವ್ಯಾಪ್ತಿಯ ಧಾರವಾಡ ಆಯುಕ್ತಾಲಯದಲ್ಲಿ 2016-17 ನೇ ಸಾಲಿನ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ / ಪ್ರೌಢ ಶಾಲಾ ಶಿಕ್ಷಕರ ಪರಸ್ಪರ ಅಂತರ ಘಟಕ ವರ್ಗಾವಣೆ ಕೌನ್ಸಿಲಿಂಗ್ ಪೂರ್ವ ನಿಗದಿತ ವೇಳಾಪಟ್ಟಿಯಂತೆ ದಿನಾಂಕ: 14-09-20216 ರಂದು ಹಾಗೂ ದಿನಾಂಕ: 15-09-2016 ರಂದು ಯಥಾವತ್ತಾಗಿ ನಡೆಯುತ್ತದೆ. ಕಾರಣ ಸದರ ದಿನಗಳಂದು ಎಲ್ಲ ಶಿಕ್ಷಕರು ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ನಿಮ್ಮ ಹಂತದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವುದು. ಒಂದು ವೇಳೆ ದಿನಾಂಕ: 14-09-2016 ರಂದು ನಡೆಯಲಿರುವ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಪರಸ್ಪರ ಅಂತರ ಘಟಕ ವರ್ಗಾವಣೆ ಕೌನ್ಸಿಲಿಂಗ್‌ಗೆ ಅನಾನುಕೂಲತೆಯಿಂದ ಹಾಜರಾಗದೇ ಇದ್ದಲ್ಲಿ ಅಂತಹ ಶಿಕ್ಷಕರಿಗೆ ದಿನಾಂಕ: 15-09-2016 ರಂದು ಧಾರವಾಡ ಆಯುಕ್ತಾಲಯ ಹಂತದ ಕೌನ್ಸಿಲಿಂಗ್‌ಗೆ ಹಾಜರಾಗಲು ಅವಕಾಶ ಕಲ್ಪಿಸಲಾಗಿದೆ.

ಪ್ರೌಢ ಶಾಲಾ ಶಿಕ್ಷಕರ ಪರಸ್ಪರ ಅಂತರ ಘಟಕ ವರ್ಗಾವಣೆ ಕೌನ್ಸಿಲಿಂಗ್ ಪೂರ್ವ ನಿಗದಿತ ವೇಳಾಪಟ್ಟಿಯಂತೆ ದಿನಾಂಕ: 15-09-2016 ರಂದು ಧಾರವಾಡದಲ್ಲಿ ಯಥಾವತ್ತಾಗಿ ನಡೆಯುತ್ತದೆ.

(ಎಂ.ಡಿ.ಬಳ್ಳಾರಿ)
ನಿರ್ದೇಶಕರು ಹಾಗೂ ವರ್ಗಾವಣೆ ವೃಂದ
ನಿರ್ವಹಣಾ ಪ್ರಾಧಿಕಾರಿಗಳು
ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

ಗೆ,

ವಿಭಾಗದ ಎಲ್ಲ ಉಪನಿರ್ದೇಶಕರು [ಆಡಳಿತ] ಇವರಿಗೆ ಅಗತ್ಯ ಹಾಗೂ ತುರ್ತು ಕ್ರಮಕ್ಕಾಗಿ